...

335 (180) : ಶ್ರೀ ಕೃಷ್ಣಪಾಲೇಮಾರ್ (ಸೂರತ್ಕಲ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಈ ತನಕ ಒಟ್ಟು ಎಷ್ಟು ಜನ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ;

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹಾಗೂ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಸಮುದಾಯಗಳ ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆಗನುಗುಣವಾಗಿ ಫಲಾನುಭವಿಗಳನ್ನು ಗುರುತಿಸಲಾಗಿದೆಯೇ;

ಇ) ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸಿ ಯೋಜನೆಯನ್ನು ವಿಸ್ತಾರಗೊಳಿಸಲಾಗುವುದೇ;

ಈ) ಹಾಗಿದ್ದಲ್ಲಿ, ಮೀಸಲಿರಿಸಿದ್ದ ಅಂದಾಜು ಮೊತ್ತವೆಷ್ಟು;

ಉ) ಈ ಯೋಜನೆಯಡಿಯಲ್ಲಿ ಸೂರತ್ಕಲ್ ಕ್ಷೇತ್ರದ ಎಷ್ಟು ಜನ ರೈತರಿಗೆ ಅನುಕೂಲ ಕಲ್ಪಿಸಲಾಗಿದೆ;

ಊ) ಪ್ರಸಕ್ತ ಸಾಲಿನಲ್ಲಿ ಈ ಕ್ಷೇತ್ರದಲ್ಲಿ ಗುರುತಿಸಲಾದ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಈ ಕೆಳಕಂಡ 3 ನಿಗಮಗಳಿಂದ ಸೌಲಭ್ಯವನ್ನು ಪಡೆದ ಫಲಾನುಭವಿಗಳ ವಿವರವು ಈ ಕೆಳಕಂಡಂತಿದೆ;

ಕ್ರ. ಸಂ.	ನಿಗಮಗಳ ಹೆಸರು	ಫಲಾನುಭವಿಗಳ ಸಂಖ್ಯೆ
1.	ಕ.ಪ.ಜಾ.ಪ.ವ.ಅ.ನಿ	47,359
2.	ಕ.ಹಿ.ವ.ಅ.ನಿ	4,946
3.	ಕ.ಅ.ಸ.ಅ.ನಿ	2,046

ಆ) ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನಕ್ಕೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹಾಗೂ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಸಮುದಾಯಗಳ ಸಣ್ಣ ಮತ್ತು ಅತಿಸಣ್ಣ ರೈತರನ್ನು ಆಯ್ಕೆ ಸಮಿತಿಯ ಮೂಲಕ ಗುರುತಿಸಲಾಗುತ್ತಿದೆ.

ಇ) ಮತ್ತು ಈ)

(1) ಅನುದಾನದ ಲಭ್ಯತೆಯನ್ನು ಅವಲಂಬಿಸಿ ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು.

(2) 2004–05ನೇ ಸಾಲಿನ ಆಯವ್ಯಯದಲ್ಲಿ ಗಂಗಾ ಕಲ್ಯಾಣ ಯೋಜನೆಯ ಅನುಷ್ಠಾನಕ್ಕಾಗಿ ಮೀಸಲಿಟ್ಟ ಹಣದ ವಿವರ ಈ ಕೆಳಕಂಡಂತಿದೆ.

		(ಕೋಟಿಗಳಲ್ಲಿ)
1.	ಕ.ಪ.ಜಾ.ಪ.ವ.ಅ.ನಿ	ರೂ. 12.50
2.	ಕ.ಹಿ.ವ.ಅ.ನಿ	ರೂ. 5.00
3.	ಕ.ಅ.ಸ.ಅ.ನಿ	ರೂ. 5.00

(3) 2004–05ನೇ ಸಾಲಿಗೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಸಣ್ಣ ರೈತರಿಗಾಗಿ ರೂ. 13.00 ಕೋಟಿಗಳನ್ನು ಒದಗಿಸಲಾಗಿದೆ.

ಊ) ಸೂರತ್ಕಲ್ ಕ್ಷೇತ್ರದಿಂದ ಕೊಳವೆಬಾವಿ ಅರ್ಜಿಗಳು ಬಂದಿಲ್ಲವಾದುದರಿಂದ ದಿ: 31–3–04ರವರೆಗೆ ಸವಲತ್ತು ಕಲ್ಪಿಸಿರುವುದಿಲ್ಲ.

ಊ) ಸೂರತ್ಕಲ್ ಕ್ಷೇತ್ರದಿಂದ ಅರ್ಜಿಯನ್ನು ಸಲ್ಲಿಸಲು ಪ್ರಚಾರ ನೀಡಿದ್ದರಿಂದ (1) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಹಾಗೂ (2) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ತಲಾ ಒಂದೊಂದು ಅರ್ಜಿಯು ಬಂದಿರುತ್ತದೆ.

...

337 (196) : ಶ್ರೀ ಕೃಷ್ಣಪಾಲೇಮಾರ್ ಜೆ. (ಸೂರತ್ಕಲ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮೀನುಗಾರಿಕೆಗೆ 2002–03 ಮತ್ತು 2003–04ನೇ ಸಾಲುಗಳಲ್ಲಿ ವಿವಿಧ ಯೋಜನೆಗಳಡಿ ನಿಗದಿಪಡಿಸಲಾದ ಹಣ ಎಷ್ಟು;

ಆ) ಈ ಯೋಜನೆಯಡಿ ಮೀನುಗಾರಿಕೆ ತರಬೇತಿಯ ಯೋಜನೆಗಳೇನಾದರೂ ಇದೆಯೇ: ಇದ್ದಲ್ಲಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಎಷ್ಟು ಜನರಿಗೆ ಈ ತರಬೇತಿ ನೀಡಲಾಗಿದೆ.

ಇ) ಮೀನು ಮಾರುಕಟ್ಟೆ ಸಹಾಯ ಧನ ಯೋಜನೆ ಅಡಿಯಲ್ಲಿ ಸೂರತ್ಕಲ್ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಗುರುತಿಸಿ ಸಹಾಯ ಧನ ಒದಗಿಸಲಾಗಿದೆ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ಮೀನುಗಾರಿಕೆಗೆ 2002–03 ಮತ್ತು 2003–04ನೇ ಸಾಲುಗಳಲ್ಲಿ ವಿವಿಧ ಯೋಜನೆಗಳಡಿ ನಿಗದಿಪಡಿಸಲಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲಾಖಾ ಯೋಜನೆಯಲ್ಲಿ ಮೀನುಗಾರಿಕೆ ತರಬೇತಿ ಕಾರ್ಯಕ್ರಮವಿದ್ದು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಜವಾಬ್ದಾರಿಯುತ ಮೀನುಗಾರಿಕೆ ತರಬೇತಿಯಲ್ಲಿ 130 ಮೀನುಗಾರರು, ಮೀನುಗಾರಿಕಾ ಜಾಗೃತಿ ಶಿಬಿರದಲ್ಲಿ 98 ಮೀನುಗಾರ ಮಹಿಳೆಯರು ಹಾಗೂ ಮೀನು ಕೃಷಿ ಕೊಳದ ಪ್ರಾತ್ಯಕ್ಷತೆಯಲ್ಲಿ 40 ಮೀನು ಕೃಷಿಕರು ಭಾಗವಹಿಸಿರುತ್ತಾರೆ.

ಇ) ಸೂರತ್ಕಲ್ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷದಲ್ಲಿ 14 ಜನ ಫಲಾನುಭವಿಗಳಿಗೆ ಸಹಾಯಧನ ಒದಗಿಸಲಾಗಿದೆ.